ಡೀಮ್ಡ್ ಅರಣ್ಯ ಪ್ರದೇಶವನ್ನು ಗುರುತಿಸುವಿಕೆ

22 (127) ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) :– ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) ಅರಣ್ಯದ ಕುರುಹೇ ಇಲ್ಲದ ಪ್ರದೇಶವನ್ನು ಡೀಮ್ಡ್ ಅರಣ್ಯ ವಲಯ ಎಂದು ಗುರುತಿಸಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ; ಎಲ್ಲೆಲ್ಲಿ ಈ ರೀತಿಯ ಪ್ರಕರಣಗಳು ಜರುಗಿವೆ ; ಇದಕ್ಕೆ ಕಾರಣಗಳೇನು ; (ವಿವರ ನೀಡುವುದು)

(ಆ) ಕುರುಚಲು ಗಿಡ, ಕಲ್ಲು ಬಂಡೆಗಳು, ಜನವಸತಿ ಪ್ರದೇಶಗಳನ್ನು ಡೀಮ್ಡ್ ಅರಣ್ಯ ಎಂದು ಗುರುತಿಸುವ ಪರಿಣಾಮವಾಗಿ ಜನರನ್ನು ಇಲ್ಲಿಂದ ಒಕ್ಕಲೆಬ್ಬಿಸುವ ಪರಿಸ್ಥಿತಿ ನಿರ್ಮಾಣವಾಗಿರುವುದು ನಿಜವೇ ;

(ಇ) ಅರಣ್ಯ ಪ್ರದೇಶದ ವ್ಯಾಪ್ತಿ, ವಿಸ್ತೀರ್ಣವನ್ನು ಗುರುತಿಸುವ ಮಾನದಂಡಗಳೇನು ; ಹಾಲಿ ಇರುವ ಅರಣ್ಯ ವ್ಯಾಪ್ತಿಯ ಅರ್ಥ ವಿವರಣೆ ಏನು ;

(ಈ) ಈ ಪೈಕಿ ಮೀಸಲು ಅರಣ್ಯ ದಟ್ಟಾರಣ್ಯ ಹಾಗೂ ಅರಣ್ಯ ಕಾಯ್ದೆಯಡಿ ಗುರುತಿಸಿದ ಅರಣ್ಯ ಜಾಗದಲ್ಲದೇ ಕಂದಾಯ ಇಲಾಖೆ ವ್ಯಾಪ್ತಿಯಲ್ಲಿರುವ ಅರಣ್ಯ ಪ್ರದೇಶ ಇವುಗಳ ಗುರುತಿಸುವ ಪ್ರಕ್ರಿಯೆ ಹೇಗೆ ನಡೆಯುತ್ತಿದೆ ;

(ಉ) ಬೆಟ್ಟ, ಭೂಮಿ ಜುಮ್ಮಾಬಾಣೆ, ಕಾವಲ್‌ಗಳು, ಕುಮ್ಕಿ ಅರಣ್ಯ, ಪೈಸರಿಭೂಮಿ, ಇತರೆ ಕಂದಾಯ ದಾಖಲೆಗಳ ಪ್ರಕಾರದ ಅರಣ್ಯ ಜಂಗಲ್ ಪ್ಲಾಂಟೇಷನ್ ಇಲ್ಲದ ಸಿ ಅಂಡ್ ಡಿ ಭೂಮಿ ಮತ್ತು ಪ್ಲಾಂಟೇಷನ್ ಬೆಳೆದ ಗೋಮಾಳ ಭೂಮಿ ಇವೆಲ್ಲವೂ ಅರಣ್ಯ ಅಲ್ಲವೇ ಎಂಬ ಬಗ್ಗೆ ಇತ್ಯರ್ಥಪಡಿಸಲು ಸರ್ಕಾರ ಮುಂದಾಗುವುದೇ ; ಈ ನಿಟ್ಟಿನಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ ? (ಸಂಪೂರ್ಣ ವಿವರ ನೀಡುವುದು)

ಶ್ರೀ ಬಿ. ರಮಾನಾಥ್ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :–

(ಅ) ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ ರಿಟ್ ಅರ್ಜಿ ಸಂಖ್ಯೆ: 202/1995 ಗೋದಾವರ್ಮನ್ ತಿರಮಲಪಾಡ್–ವಿರುದ್ಧ–ಯೂನಿಯನ್ ಆಫ್ ಇಂಡಿಯಾ ಹಾಗೂ ಇತರರು ಪ್ರಕರಣದಲ್ಲಿ ನ್ಯಾಯಾಲಯವು ದಿನಾಂಕ: 12–12–1996 ರಂದು ನೀಡಿರುವ ತೀರ್ಪಿನಲ್ಲಿ ರಾಜ್ಯದಲ್ಲಿನ ಎಲ್ಲಾ ಅರಣ್ಯ ಪ್ರದೇಶಗಳನ್ನು (ಅರಣ್ಯ ಲಕ್ಷಣಗಳನ್ನು ಹೊಂದಿರುವಂತಹ ಸರ್ಕಾರಿ/ ಸರ್ಕಾರೇತರ ಭೂಮಿಗಳನ್ನು) ಗುರುತಿಸಿ ವರದಿಯನ್ನು ಸಲ್ಲಿಸಲು ತಿಳಿಸಿದ ಮೇರೆಗೆ ಕರ್ನಾಟಕ ರಾಜ್ಯ ಸರ್ಕಾರವು ಸರ್ಕಾರಿ ಆದೇಶ ಸಂಖ್ಯೆ: ಎಫ್‌ಇಇ 2 ಎಫ್‌ಎಫ್‌ಎಂ 97 ದಿನಾಂಕ :10–01–1997 ರಲ್ಲಿ ತಜ್ಞರ

ಸಮಿತಿಯೊಂದನ್ನು ನೇಮಕ ಮಾಡಿರುತ್ತಾರೆ. ತಜ್ಞರ ಸಮಿತಿ–1 ನೀಡಿರುವ ವರದಿಯ ಆಧಾರದ ಮೇಲೆ ರಾಜ್ಯ ಸರ್ಕಾರವು 25–09–1997 ರಂದು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಅಫಿಡವಿಟ್ ಸಲ್ಲಿಸಿರುತ್ತದೆ.

ಅರಣ್ಯ ಕ್ಷೇತ್ರಗಳ ವಿವರಗಳನ್ನು ವಿವರವಾಗಿ ತಯಾರಿಸಲು ತಿಳಿಸಿದ ಮೇರೆಗೆ ಕರ್ನಾಟಕ ರಾಜ್ಯ ಸರ್ಕಾರವು ತನ್ನ ಆದೇಶ ಸಂಖ್ಯೆ : ಎಫ್ಇಇ 270 ಎಫ್ಜಿಎಲ್ 2002 ದಿನಾಂಕ : 25–09–2002 ಪುನರ್ ರಚಿತ ಎಕ್ಸ್ಪರ್ಟ್ ಕಮಿಟಿ–1ನ್ನು ಪುನರ್ ರಚಿಸಿರುತ್ತಾರೆ.

ಈ ಪುನರ್ ರಚಿತ ತಜ್ಞರ ಸಮಿತಿ–1 2002 ರಲ್ಲಿ ನೀಡಿರುವ ವರದಿಯಲ್ಲಿ ನಮೂದಿಸಿರುವ ಅರಣ್ಯ ಕ್ಷೇತ್ರಗಳ ವಿವರಗಳನ್ನು ಮತ್ತೊಮ್ಮೆ ಕೂಲಂಕಷವಾಗಿ ಪರಿಶೀಲಿಸಲು ರಾಜ್ಯ ಸರ್ಕಾರವು ತನ್ನ ಆದೇಶ ಸಂಖ್ಯೆ : ಎಫ್ಇಇ 185 ಎಫ್ಎಎಫ್ 2011, ದಿನಾಂಕ: 15–5–2014 ರಲ್ಲಿ ಹೊರಡಿಸಿ ಜಿಲ್ಲಾ ಮಟ್ಟದ, ಕಂದಾಯ ವಿಭಾಗ ಮಟ್ಟದ ಮತ್ತು ರಾಜ್ಯ ಮಟ್ಟದ ಕಮಿಟಿಗಳನ್ನು ರಚಿಸಿರುತ್ತದೆ. ಈ ಕಮಿಟಿಗಳು ಸರ್ಕಾರದ ಆದೇಶದಲ್ಲಿ ನೀಡಿರುವ ಮಾರ್ಗಸೂಚಿಯಂತೆ ಡೀಮ್ಡ್ ಫಾರೆಸ್ಟ್ಗಳನ್ನು ಪರಿಶೀಲಿಸಿ ಆರು ತಿಂಗಳೊಳಗಾಗಿ ವರದಿಯನ್ನು ಸಲ್ಲಿಸಬೇಕಾಗಿರುತ್ತದೆ.

ಈಗಾಗಲೇ ಅಧಿಸೂಚಿತವಾಗಿರುವ ಅರಣ್ಯ ಪ್ರದೇಶಗಳನ್ನು ಹೊರತುಪಡಿಸಿ ಇತರೆ ಅರಣ್ಯ ಪ್ರದೇಶಗಳನ್ನು ಗುರುತಿಸಲು ಸರ್ಕಾರದ ದಿನಾಂಕ : 15–5–2014 ರ ಆದೇಶದಲ್ಲಿ ನೀಡಿರುವ ನಿರ್ದಿಷ್ಟ ಮಾನದಂಡದಂತೆ ಮಾತ್ರ ಪರಿಶೀಲಿಸುವಂತೆ ತಿಳಿಸಲಾಗಿದೆ. ಆದುದರಿಂದ, ಅರಣ್ಯ ಲಕ್ಷಣಗಳನ್ನು ಹೊಂದಿರುವಂತಹ ಪ್ರದೇಶಗಳನ್ನು ಮಾತ್ರ ಡೀಮ್ಡ್ ಫಾರೆಸ್ಟ್ಗಳೆಂದು ಪರಿಗಣಿಸುವಂತೆ ಸರ್ಕಾರಿ ಆದೇಶದಲ್ಲಿ ಸ್ಪಷ್ಟವಾಗಿ ಸೂಚಿಸಲಾಗಿದೆ.

(ಆ) ಸರ್ಕಾರದ ಆದೇಶ ಸಂಖ್ಯೆ: ಎಫ್ಇಇ 185 ಎಫ್ಎಎಫ್ 2011, ದಿನಾಂಕ 15–5–2014 ರಲ್ಲಿ ನೀಡಿರುವ ಮಾರ್ಗಸೂಚಿಗಳನ್ವಯ ಡೀಮ್ಡ್ ಫಾರೆಸ್ಟ್ಗಳ ಬಗ್ಗೆ ಪರಿಶೀಲಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿದ ನಂತರ ಈ ಬಗ್ಗೆ ಇರುವ ಗೊಂದಲಗಳು ನಿವಾರಣೆಯಾಗುತ್ತವೆ.

(ಇ) ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ ರಿಟ್ ಅರ್ಜಿ ಸಂಖ್ಯೆ: 202/1995 ಗೋದಾವರ್ಮನ್ ತಿರುಮಲಪಾಡ್–ವಿರುದ್ಧ–ಯೂನಿಯನ್ ಆಫ್ ಇಂಡಿಯಾ ಇತರರು ಪ್ರಕರಣದಲ್ಲಿ ನ್ಯಾಯಾಲಯವು ದಿನಾಂಕ : 12–12–1996 ರಂದು ನೀಡಿರುವ ತೀರ್ಪಿನಲ್ಲಿ ಅರಣ್ಯ ಭೂಮಿಯ ಬಗ್ಗೆ ಈ ಕೆಳಕಂಡಂತೆ ವ್ಯಾಖ್ಯಾನಿಸಲಾಗಿರುತ್ತದೆ :

"ಅರಣ್ಯ ಸಂರಕ್ಷಣಾ ಕಾಯ್ದೆ, 1980 ಅನ್ನು ಮುಂದಿನ ಅರಣ್ಯ ನಾಶವನ್ನು ತಡೆದು ಇದರ ಫಲವಾಗಿ ಪರಿಸರ ಅಸಮತೋಲನವನ್ನು ಹೋಗಲಾಡಿಸುವ ಉದ್ದೇಶದಿಂದ ಜಾರಿಗೆ ತರಲಾಗಿದೆ.